# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

| ಭಾಗ – ೪ಎ<br>Part – IVA | ಬೆಂಗಳೂರು, ಮಂಗಳವಾರ, ೧೦, ಮಾರ್ಚ್, ೨೦೨೬(ಫಾಲ್ಗುಣ, ೧೯, ಶಕವರ್ಷ, ೧೯೪೭)<br>BENGALURU, TUESDAY, 10, MARCH, 2026 (PHALGUNA, 19, SHAKAVARSHA, 1947) | ನಂ. ೨೦೧<br>No. 201 |
|---|---|---|


ಕರ್ನಾಟಕ ವಿಧಾನಸಭೆ

ಹದಿನಾರನೇ ವಿಧಾನಸಭೆ

ಒಂಭತ್ತನೇ ಅಧಿವೇಶನ

(ಮುಂದುವರೆದ ಉಪವೇಶನ)

## ಕರ್ನಾಟಕ ಜ್ಞಾನಭಂಡಾರ ಹಸ್ತಪ್ರತಿಗಳು ಮತ್ತು ಡಿಜಿಟೀಕರಣ ವಿಧೇಯಕ, 2026

**(2026ರ ವಿಧಾನಸಭೆಯ ವಿಧೇಯಕ ಸಂಖ್ಯೆ–02)**

ಕರ್ನಾಟಕ ರಾಜ್ಯದಲ್ಲಿರುವ ಹಸ್ತಪ್ರತಿಗಳ ಸಮೀಕ್ಷೆ, ದಾಖಲೀಕರಣ, ಸಂರಕ್ಷಣೆ, ಡಿಜಿಟೀಕರಣ, ಸಂಶೋಧನೆ, ಪ್ರಕಟಣೆ ಮತ್ತು ಸಾರ್ವಜನಿಕರಿಗೆ ಲಭ್ಯಗೊಳಿಸುವುದನ್ನು ಉಪಬಂಧಿಸುವುದಕ್ಕಾಗಿ ಕರ್ನಾಟಕ ಹಸ್ತಪ್ರತಿಗಳ ಪ್ರಾಧಿಕಾರವನ್ನು ಸ್ಥಾಪಿಸಲು ಒಂದು ವಿಧೇಯಕ.

ಕರ್ನಾಟಕ ರಾಜ್ಯದಲ್ಲಿರುವ ಹಸ್ತಪ್ರತಿಗಳ ಸಮೀಕ್ಷೆ, ದಾಖಲೀಕರಣ, ಸಂರಕ್ಷಣೆ, ಡಿಜಿಟೀಕರಣ, ಸಂಶೋಧನೆ, ಪ್ರಕಟಣೆ ಮತ್ತು ಸಾರ್ವಜನಿಕರಿಗೆ ಲಭ್ಯಗೊಳಿಸುವುದಕ್ಕಾಗಿ, ಕರ್ನಾಟಕ ಹಸ್ತಪ್ರತಿಗಳ ಪ್ರಾಧಿಕಾರವನ್ನು ಸ್ಥಾಪಿಸಲು ಹಾಗೂ ಅದಕ್ಕೆ ಸಂಬಂಧಪಟ್ಟ ಮತ್ತು ಪ್ರಾಸಂಗಿಕ ವಿಷಯಗಳನ್ನು ಉಪಬಂಧಿಸುವುದಕ್ಕಾಗಿ ಯುಕ್ತವಾಗಿರುವುದರಿಂದ;

ಇದು, ಭಾರತ ಗಣರಾಜ್ಯದ ಎಪ್ಪತ್ತೇಳನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ಜ್ಞಾನಭಂಡಾರ ಹಸ್ತಪ್ರತಿಗಳು ಮತ್ತು ಡಿಜಿಟೀಕರಣ ಅಧಿನಿಯಮ, 2026 ಎಂದು ಕರೆಯತಕ್ಕದ್ದು.

(2) ಇದು, ರಾಜ್ಯ ಸರ್ಕಾರವು ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

**2. ಪರಿಭಾಷೆಗಳು.-** ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(ಎ) ``ಹಸ್ತಪ್ರತಿ'' ಎಂದರೆ ವಿಶದಪಡಿಸಿದ ಹಸ್ತಪ್ರತಿಗಳು (Illustrated manuscripts), ತಾಳೆಗರಿಯ ಮೇಲಿನ ಕಿರುರೂಪದ ವರ್ಣಚಿತ್ರಗಳು ಮತ್ತು ಪುರಾತನ ಜ್ಞಾನವನ್ನು ಸಂರಕ್ಷಿಸುವ ಮೌಖಿಕ ಸಂಪ್ರದಾಯಗಳ ದೃಶ್ಯ-ಶ್ರವಣ ದಾಖಲೆಗಳನ್ನು ಒಳಗೊಂಡ ಹಾಗೂ ಮುದ್ರಣ ಅಥವಾ ಶಿಲಾಮುದ್ರಣ ಮಾಡದಿರುವ, ಸಂಸ್ಕೃತ, ಕನ್ನಡ, ಪ್ರಾಕೃತ, ಪಾಲಿ, ತಮಿಳು, ತೆಲುಗು, ಅರಬ್ಬೀ, ಪಾರ್ಸಿ, ಮೋಡಿ, ಶಾರದ ಅಥವಾ ಯಾವುದೇ ಇತರ ಭಾರತೀಯ ಅಥವಾ ವಿದೇಶಿ ಲಿಪಿಯುಳ್ಳ ಯಾವುದೇ ಕೈಬರಹ ಅಥವಾ ತಾಳೆಗರಿ ದಾಖಲೆ, ಭೋಜ-ತೊಗಟೆ (Birch-bark), ಹಾಳೆ, ಬಟ್ಟೆ, ತಾಮ್ರ ಪತ್ರ, ಶಿಲಾ ಶಾಸನ ಅಥವಾ ಯಾವುದೇ ಇತರ ಪದಾರ್ಥದಿಂದ ಮಾಡಿರುವ ಲಿಪಿಪತ್ರ (Script);

(ಬಿ) ``ಪ್ರಾಧಿಕಾರ'' ಎಂದರೆ, 3ನೇ ಪ್ರಕರಣದಡಿ ಸ್ಥಾಪಿಸಲಾದ ಕರ್ನಾಟಕ ಹಸ್ತಪ್ರತಿಗಳ ಪ್ರಾಧಿಕಾರ;

**3. ಪ್ರಾಧಿಕಾರದ ಸ್ಥಾಪನೆ.-** (1) ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ಕರ್ನಾಟಕ ಹಸ್ತಪ್ರತಿಗಳ ಪ್ರಾಧಿಕಾರ ಎಂದು ಕರೆಯಲಾಗುವ ಒಂದು ನಿಕಾಯವನ್ನು ಸ್ಥಾಪಿಸತಕ್ಕದ್ದು.

(2) ಪ್ರಾಧಿಕಾರವು, ಶಾಶ್ವತ ಉತ್ತರಾಧಿಕಾರ ಮತ್ತು ಸಾಮಾನ್ಯ ಮೊಹರನ್ನು ಹೊಂದಿರುವ ಒಂದು ನಿಗಮಿತ ನಿಕಾಯವಾಗಿರತಕ್ಕದ್ದು.

**4. ಪ್ರಾಧಿಕಾರದ ಸಂರಚನೆ.-** ಪ್ರಾಧಿಕಾರವು ಈ ಮುಂದಿನ ಸದಸ್ಯರನ್ನು ಒಳಗೊಂಡಿರತಕ್ಕದ್ದು,-

(ಎ) ಪುರಾತತ್ವ ಇಲಾಖೆಯ ಪ್ರಭಾರದಲ್ಲಿರುವ ಮಂತ್ರಿ - ಪದನಿಮಿತ್ತ ಅಧ್ಯಕ್ಷರು.

(ಬಿ) ಸರ್ಕಾರದ ಕಾರ್ಯದರ್ಶಿ, ಪ್ರವಾಸೋದ್ಯಮ ಇಲಾಖೆ - ಪದನಿಮಿತ್ತ ಸದಸ್ಯ ಕಾರ್ಯದರ್ಶಿ.

(ಸಿ) ಸರ್ಕಾರದ ಕಾರ್ಯದರ್ಶಿ, ಆರ್ಥಿಕ ಇಲಾಖೆ - ಪದನಿಮಿತ್ತ ಸದಸ್ಯ.

(ಡಿ) ಸರ್ಕಾರದ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ - ಪದನಿಮಿತ್ತ ಸದಸ್ಯ.

(ಇ) ಕುಲಪತಿ, ಹಂಪಿ ಕನ್ನಡ ವಿಶ್ವವಿದ್ಯಾನಿಲಯ - ಪದನಿಮಿತ್ತ ಸದಸ್ಯ.

(ಎಫ್) ನಿರ್ದೇಶಕರು, ಪ್ರಾಚ್ಯವಿದ್ಯಾ ಸಂಶೋಧನಾಲಯ, ಮೈಸೂರು - ಪದನಿಮಿತ್ತ ಸದಸ್ಯ.

(ಜಿ) ಆಯುಕ್ತರು, ಪುರಾತತ್ವ, ವಸ್ತು ಸಂಗ್ರಹಾಲಯಗಳ ಮತ್ತು ಪರಂಪರೆ ಇಲಾಖೆ - ಪದನಿಮಿತ್ತ ಸದಸ್ಯ.

(ಎಚ್) ಭಾರತಾಧ್ಯಯನ ಶಾಸ್ತ್ರ (Indology), ಕನ್ನಡ ಸಾಹಿತ್ಯ ಅಥವಾ ಹಸ್ತಪ್ರತಿ ಶಾಸ್ತ್ರದಲ್ಲಿ ಪ್ರಖ್ಯಾತರಾದ ಮೂವರು ವಿದ್ವಾಂಸರು – ಸದಸ್ಯರು.

(ಐ) ಖಾಸಗಿ ಹಸ್ತಪ್ರತಿ ಧಾರಕರು ಅಥವಾ ಮಠಗಳ ಇಬ್ಬರು ಪ್ರತಿನಿಧಿಗಳು – ಸದಸ್ಯರು.

(ಜೆ) ಡಿಜಿಟಲ್ ಮಾನವಿಕಗಳಲ್ಲಿನ ಒಬ್ಬ ತಜ್ಞ – ಸದಸ್ಯ.

**5. ಪ್ರಾಧಿಕಾರದ ಪ್ರಕಾರ್ಯಗಳು ಮತ್ತು ಅಧಿಕಾರಗಳು.-** ಪ್ರಾಧಿಕಾರವು,-

(ಎ) ಕರ್ನಾಟಕ ಮೂಲದ ಅಥವಾ ಕರ್ನಾಟಕಕ್ಕೆ ಸಂಬಂಧಪಟ್ಟ ಕರ್ನಾಟಕದೊಳಗಿನ ಮತ್ತು ಹೊರಗಿನ ಸಾರ್ವಜನಿಕ ಮತ್ತು ಖಾಸಗಿ ಅಭಿರಕ್ಷೆಯಲ್ಲಿರುವ ಹಸ್ತಪ್ರತಿಗಳ ಸಮಗ್ರ ಸಮೀಕ್ಷೆಯನ್ನು ನಡೆಸುವುದು;

(ಬಿ) ಹಸ್ತಪ್ರತಿಗಳ ರಾಜ್ಯ ವಹಿಯನ್ನು ಸಿದ್ಧಪಡಿಸುವುದು ಮತ್ತು ನಿರ್ವಹಿಸುವುದು.

(ಸಿ) ಸಂರಕ್ಷಣೆ, ಪ್ರತಿಬಂಧಕ ಮತ್ತು ನಿವಾರಕ ಕ್ರಮಗಳು, ಡಿಜಿಟೀಕರಣ, ವಿಮರ್ಶಾತ್ಮಕ ಸಂಪಾದನೆ, ಭಾಷಾಂತರ ಮತ್ತು ಪ್ರಕಟಣೆಯನ್ನು ಪ್ರೋತ್ಸಾಹಿಸುವುದು.

(ಡಿ) ಹಸ್ತಪ್ರತಿ ಸಂರಕ್ಷಣಾ ಕೇಂದ್ರಗಳು ಮತ್ತು ಸಂಪನ್ಮೂಲ ಕೇಂದ್ರಗಳನ್ನು ಸ್ಥಾಪಿಸುವುದು ಅಥವಾ ಮಾನ್ಯತೆ ನೀಡುವುದು.

(ಇ) ಸಾಂಪ್ರದಾಯಿಕ ಅಭಿರಕ್ಷಕರ ಬೌದ್ಧಿಕ ಆಸ್ತಿ ಹಕ್ಕುಗಳನ್ನು ರಕ್ಷಿಸುವಾಗ ಪ್ರವೇಶಾವಕಾಶ, ಪ್ರತಿಕೃತಿಗೊಳಿಸುವಿಕೆ ಮತ್ತು ವಾಣಿಜ್ಯ ಬಳಕೆಗಾಗಿ ಮಾರ್ಗಸೂಚಿಗಳನ್ನು ರೂಪಿಸುವುದು.

(ಎಫ್) ಹಸ್ತಪ್ರತಿಗಳ ಕಾನೂನು ಬಾಹಿರ ಸಾಗಾಣಿಕೆಯನ್ನು ತಡೆಗಟ್ಟುವುದು ಹಾಗೂ ಅವುಗಳನ್ನು ಕರ್ನಾಟಕದ ಹೊರಗಿನಿಂದ ತಾಯ್ನಾಡಿಗೆ ಮರಳಿ ತರುವುದನ್ನು ಸುಗಮಗೊಳಿಸುವುದು.

(ಜಿ) ಶಾಲಾ ಮತ್ತು ವಿಶ್ವವಿದ್ಯಾಲಯದ ಪಠ್ಯಕ್ರಮದಲ್ಲಿ ಹಸ್ತಪ್ರತಿ ಜ್ಞಾನವನ್ನು ಸಂಯೋಜಿಸುವುದು.

**6. ಹಸ್ತಪ್ರತಿಗಳ ರಾಜ್ಯ ವಹಿ.-** ಪ್ರಾಧಿಕಾರವು, ಪ್ರತಿಯೊಂದು ಹಸ್ತಪ್ರತಿಯ ಸ್ಥಳಮಾಹಿತಿ, ಮಾಲೀಕತ್ವ, ಭೌತಿಕ ಸ್ಥಿತಿ, ಲಿಪಿ, ಭಾಷೆ, ವಿಷಯ ಮತ್ತು ಲಭ್ಯತೆಯ ಸ್ಥಿತಿಗತಿಗಳ ವಿವರಗಳನ್ನು ಒಳಗೊಂಡ ಡಿಜಿಟಲ್ ಮತ್ತು ಭೌತಿಕ ರಾಜ್ಯ ವಹಿಯನ್ನು ನಿರ್ವಹಿಸತಕ್ಕದ್ದು.

**7. ಮಾಲೀಕರು ಮತ್ತು ಸ್ವಾಧೀನದಾರರಿಂದ ಕಡ್ಡಾಯ ವರದಿ.**- ಹಸ್ತಪ್ರತಿಗಳನ್ನು ಹೊಂದಿರುವ ಪ್ರತಿಯೊಬ್ಬ ವ್ಯಕ್ತಿ ಅಥವಾ ಸಂಸ್ಥೆಯು ಈ ಅಧಿನಿಯಮದ ಪ್ರಾರಂಭದ ದಿನಾಂಕದಿಂದ ಒಂದು ವರ್ಷದೊಳಗಾಗಿ ನಿಯಮಿಸಲಾದ ನಮೂನೆಯಲ್ಲಿ ಪ್ರಾಧಿಕಾರಕ್ಕೆ ವಿವರಗಳನ್ನು ಒದಗಿಸತಕ್ಕದ್ದು.

**8. ಸಮೀಕ್ಷೆ ಮತ್ತು ಡಿಜಿಟೀಕರಣಕ್ಕಾಗಿ ಪ್ರವೇಶಾವಕಾಶ.-** ಪ್ರಾಧಿಕಾರ ಅಥವಾ ಅದರ ಮೂಲಕ ಅಧಿಕೃತಗೊಳಿಸಿದ ಯಾರೇ ಅಧಿಕಾರಿಯು, ಭದ್ರತೆ ಮತ್ತು ಗೌಪ್ಯತೆಗಾಗಿ ಮಾಲೀಕನು ವಿಧಿಸಿದ ಯುಕ್ತ ಷರತ್ತುಗಳಿಗೆ ಒಳಪಟ್ಟು ಯುಕ್ತ ನೋಟೀಸಿನೊಂದಿಗೆ ಮತ್ತು ಸಮರ್ಪಕ ಸಮಯದಲ್ಲಿ ಸಮೀಕ್ಷೆ ನಡೆಸಲು, ಛಾಯಾಚಿತ್ರ ತೆಗೆಯಲು ಅಥವಾ ಹಸ್ತಪ್ರತಿಗಳನ್ನು ಡಿಜಿಟೀಕರಿಸಲು ಯಾವುವೇ ಆವರಣಗಳನ್ನು ಪ್ರವೇಶಿಸಬಹುದು.

**9. ಕರ್ನಾಟಕ ಹಸ್ತಪ್ರತಿ ಸಂರಕ್ಷಣೆ ಮತ್ತು ಡಿಜಿಟೀಕರಣ ಮಿಷನ್.-** (1) ಪ್ರಾಧಿಕಾರವು ಪ್ರತಿವರ್ಷ ಕನಿಷ್ಠ ಐದು ಲಕ್ಷ ಪುಟಗಳ ಸಂರಕ್ಷಣೆಗಾಗಿ ಹಾಗೂ ಉತ್ಕೃಷ್ಟ ಗುಣಮಟ್ಟದ (high-resolution) ಡಿಜಿಟೀಕರಣಕ್ಕಾಗಿ ಕಾಲಮಿತಿಯ ಮಿಷನ್-ಅನ್ನು ಪ್ರಾರಂಭಿಸತಕ್ಕದ್ದು.

**10. ಸಾರ್ವಜನಿಕ ಡೊಮೈನ್ ಮತ್ತು ನಿರ್ಬಂಧಿತ ಪ್ರವೇಶಾವಕಾಶ.-** ಡಿಜಿಟೀಕೃತ ಹಸ್ತಪ್ರತಿಗಳನ್ನು ಸಾರ್ವಜನಿಕ ಡೊಮೈನಿನಲ್ಲಿ, ಮಾಲೀಕನು ಸಮರ್ಥನೀಯ ಧಾರ್ಮಿಕ ಅಥವಾ ಖಾಸಗಿ ಕಾರಣಗಳನ್ನು ವಿಧಿಸಿದ ಹೊರತು ಅದಕ್ಕಾಗಿ ಮುಡಿಪಾಗಿಡಲಾದ ಕರ್ನಾಟಕ ಜ್ಞಾನ ಭಂಡಾರ ಪೋರ್ಟಲ್-ನಲ್ಲಿ ಅಪ್‌ಲೋಡ್ ಮಾಡತಕ್ಕದ್ದು.

**11. ಕರ್ನಾಟಕ ಹಸ್ತಪ್ರತಿಗಳ ನಿಧಿ.-** ರಾಜ್ಯ ಸರ್ಕಾರದಿಂದ ಅನುದಾನಗಳು, ಕೇಂದ್ರ ಸರ್ಕಾರದ ಸ್ಕೀಮುಗಳು, ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ (CSR) ಕೊಡುಗೆಗಳು ಮತ್ತು ದೇಣಿಗೆಗಳೊಂದಿಗೆ ಲೋಪ-ಮುಕ್ತ ನಿಧಿಯನ್ನು (non-lapsable fund) ಸ್ಥಾಪಿಸತಕ್ಕದ್ದು.

**12. ಅನುಮತಿಯ ಹೊರತಾದ ಹಾನಿ ಅಥವಾ ರಫ್ತಿನ ಮೇಲಿನ ನಿಷೇಧ.-** ಯಾರೇ ವ್ಯಕ್ತಿಯು, ಪ್ರಾಧಿಕಾರದ ಲಿಖಿತ ಪೂರ್ವಾನುಮತಿ ಇಲ್ಲದೆ ಕರ್ನಾಟಕ ಪಾರಂಪರಿಕ ಹಸ್ತಪ್ರತಿ ಎಂಬುದಾಗಿ ಘೋಷಿಸಲಾದ ಯಾವುದೇ ಹಸ್ತಪ್ರತಿಯನ್ನು ಉದ್ದೇಶಪೂರ್ವಕವಾಗಿ ಹಾನಿಗೊಳಿಸುವುದು, ನಾಶಪಡಿಸುವುದು ಅಥವಾ ರಫ್ತನ್ನು ಮಾಡತಕ್ಕದ್ದಲ್ಲ.

**13. ದಂಡನೆಗಳು.-** 7 ಮತ್ತು 12ನೇ ಪ್ರಕರಣಗಳ ಉಲ್ಲಂಘನೆಯು, ಮೂರು ವರ್ಷಗಳವರೆಗಿನ ಕಾರಾವಾಸ ಅಥವಾ 5 ಲಕ್ಷ ರೂಪಾಯಿಗಳವರೆಗಿನ ಜುಲ್ಮಾನೆ ಅಥವಾ ಅವೆರಡರಿಂದಲೂ ದಂಡನೀಯವಾಗತಕ್ಕದ್ದು.

**14. ನಿಯಮಗಳ ರಚನಾಧಿಕಾರ.-** (1) ಈ ಅಧಿನಿಯಮದ ಉದ್ದೇಶಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ರಾಜ್ಯ ಸರ್ಕಾರವು ಸರ್ಕಾರಿ ರಾಜ್ಯಪತ್ರದಲ್ಲಿ ಪೂರ್ವಪ್ರಕಟಣೆಯ ತರುವಾಯ ಅಧಿಸೂಚನೆಯ ಮೂಲಕ ನಿಯಮಗಳನ್ನು ರಚಿಸಬಹುದು.

(2) ಈ ಅಧಿನಿಯಮದ ಮೇರೆಗೆ ರಚಿಸಲಾದ ಪ್ರತಿಯೊಂದು ನಿಯಮವನ್ನು ರಚಿಸಿದ ತರುವಾಯ, ಆದಷ್ಟು ಬೇಗನೆ, ರಾಜ್ಯ ವಿಧಾನಮಂಡಲದ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ, ಒಂದು ಅಧಿವೇಶನದಲ್ಲಿ ಅಥವಾ ಎರಡು ಅಥವಾ ಹೆಚ್ಚಿನ ನಿರಂತರ ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಹದಿನಾಲ್ಕು ದಿನಗಳ ಅವಧಿಯವರೆಗೆ

ಮಂಡಿಸತಕ್ಕದ್ದು ಮತ್ತು ಮೇಲೆ ಹೇಳಿದ ಅಧಿವೇಶನಗಳ ಅಥವಾ ನಿರಂತರ ಅಧಿವೇಶನಗಳ ನಿಕಟ ತರುವಾಯದ ಅಧಿವೇಶನದ ಮುಕ್ತಾಯಕ್ಕೆ ಮೊದಲು ಆ ನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಎರಡೂ ಸದನಗಳೂ ಒಪ್ಪಿದರೆ ಅಥವಾ ಆ ನಿಯಮವನ್ನು ಮಾಡಕೂಡದೆಂದು ಎರಡೂ ಸದನಗಳೂ ಒಪ್ಪಿದರೆ ಆ ನಿಯಮವು ಆ ಮಾರ್ಪಾಟನ್ನು ಅಥವಾ ರದ್ದತಿಯನ್ನು ಅಧಿಸೂಚಿಸಿದ ದಿನಾಂಕದಿಂದ ಅಂಥ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗಿರತಕ್ಕದ್ದು ಅಥವಾ ಸಂದರ್ಭಾನುಸಾರ, ಪರಿಣಾಮಕಾರಿಯಾಗಿರತಕ್ಕದ್ದಲ್ಲ; ಆದಾಗ್ಯೂ ಅಂಥ ಯಾವುದೇ ಮಾರ್ಪಾಟು ಅಥವಾ ರದ್ದತಿಯು ಆ ನಿಯಮದ ಮೇರೆಗೆ ಹಿಂದೆ ಮಾಡಿದ ಯಾವುದೇ ಕಾರ್ಯದ ಮಾನ್ಯತೆಗೆ ಬಾಧಕವಾಗತಕ್ಕದ್ದಲ್ಲ.

**15. ಅಧ್ಯಾರೋಹಿ ಪರಿಣಾಮ.-** ಈ ಅಧಿನಿಯಮದ ಉಪಬಂಧಗಳು ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿಗೆ ಅಸಂಗತವಾಗಿರುವುದೇನೇ ಒಳಗೊಂಡಿದ್ದರೂ ಪರಿಣಾಮಕಾರಿಯಾಗಿರತಕ್ಕದ್ದು.

**16. ತೊಂದರೆಗಳ ನಿವಾರಣೆ.-** (1) ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೆ ತರುವಲ್ಲಿ, ಯಾವುದೇ ತೊಂದರೆ ಉದ್ಭವಿಸಿದರೆ, ರಾಜ್ಯ ಸರ್ಕಾರವು ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟಿಸಿದ ಆದೇಶದ ಮೂಲಕ, ಆ ತೊಂದರೆಯ ನಿವಾರಣೆಗಾಗಿ ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಾಗಿರದ, ಅವಶ್ಯಕ ಮತ್ತು ಯುಕ್ತವೆಂದು ಕಂಡುಬರುವಂಥ ಉಪಬಂಧಗಳನ್ನು ರಚಿಸಬಹುದು:

ಪರಂತು, ಈ ಅಧಿನಿಯಮದ ಪ್ರಾರಂಭದ ದಿನಾಂಕದಿಂದ ಎರಡು ವರ್ಷಗಳು ಮುಕ್ತಾಯವಾದ ತರುವಾಯ ಅಂಥ ಆದೇಶವನ್ನು ಮಾಡತಕ್ಕದ್ದಲ್ಲ.

(2) ಈ ಪ್ರಕರಣದ ಅಡಿಯಲ್ಲಿ ಹೊರಡಿಸಲಾದ ಪ್ರತಿಯೊಂದು ಆದೇಶವನ್ನು, ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೇ ರಾಜ್ಯ ವಿಧಾನ ಮಂಡಲದ ಪ್ರತಿಯೊಂದು ಸದನದ ಮುಂದೆ ಮಂಡಿಸತಕ್ಕದ್ದು.

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಈ ಮುಂದಿನವುಗಳಿಗಾಗಿ,-

(i) ಕರ್ನಾಟಕ ರಾಜ್ಯದಲ್ಲಿರುವ ಹಸ್ತಪ್ರತಿಗಳ ಸಮೀಕ್ಷೆ, ದಾಖಲೀಕರಣ, ಸಂರಕ್ಷಣೆ, ಡಿಜಿಟೀಕರಣ, ಸಂಶೋಧನೆ, ಪ್ರಕಟಣೆ ಮತ್ತು ಸಾರ್ವಜನಿಕರಿಗೆ ಲಭ್ಯಗೊಳಿಸುವುದನ್ನು ಉಪಬಂಧಿಸುವುದು; ಮತ್ತು

(ii) ಮೇಲಿನ ಉದ್ದೇಶಗಳನ್ನು ಈಡೇರಿಸಲು ಕರ್ನಾಟಕ ಹಸ್ತಪ್ರತಿಗಳ ಪ್ರಾಧಿಕಾರವನ್ನು ಸ್ಥಾಪಿಸುವುದು,

- ಅವಶ್ಯಕವೆಂದು ಪರಿಗಣಿಸಿದೆ.

ಆದ್ದರಿಂದ ಈ ವಿಧೇಯಕ.

## ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಶಾಸನಾತ್ಮಕ ಕ್ರಮದಿಂದ ಯಾವುದೇ ಹೆಚ್ಚಿನ ವೆಚ್ಚವು ಉಂಟಾಗುವುದಿಲ್ಲ.

## ಪ್ರತ್ಯಾಯೋಜಿತ ಶಾಸನ ರಚನಾಧಿಕಾರದ ಕುರಿತು ಜ್ಞಾಪನ ಪತ್ರ

| | |
|---|---|
| **ಖಂಡ- 14** | (1)ನೇ ಉಪಖಂಡವು ಅಧಿನಿಯಮದ ಉದ್ದೇಶಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ನಿಯಮಗಳನ್ನು ರಚಿಸಲು ರಾಜ್ಯಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ. |

ಪ್ರಸ್ತಾವಿತ ಶಾಸನ ರಚನೆಯ ಪ್ರತ್ಯಾಯೋಜನೆಯು ವಾಡಿಕೆಯ ಸ್ವರೂಪದ್ದಾಗಿರುತ್ತದೆ.

**ಎಚ್. ಕೆ. ಪಾಟೀಲ್**
ಕಾನೂನು, ನ್ಯಾಯ, ಮಾನವ ಹಕ್ಕುಗಳು,
ಸಂಸದೀಯ ವ್ಯವಹಾರಗಳು ಮತ್ತು ಶಾಸನ
ರಚನೆ ಹಾಗೂ ಪ್ರವಾಸೋದ್ಯಮ ಮಂತ್ರಿ

**ಎಂ.ಕೆ. ವಿಶಾಲಾಕ್ಷಿ**
ಕಾರ್ಯದರ್ಶಿ
ಕರ್ನಾಟಕ ವಿಧಾನಸಭೆ

**KARNATAKA LEGISLATIVE ASSEMBLY**

**SIXTEENTH LEGISLATIVE ASSEMBLY**

**NINTH SESSION**

**(Adjourned Meetings)**

# THE KARNATAKA JNANA BHANDAR MANUSCRIPTS AND DIGITISATION BILL, 2026

**(LA Bill No. 02 of 2026)**

A Bill to provide for the survey, documentation, conservation, digitisation, research, publication and public access of manuscripts in the State of Karnataka, to establish the Karnataka Manuscripts Authority.

Whereas it is expedient to provide for the survey, documentation, conservation, digitisation, research, publication and public access of manuscripts in the State of Karnataka, to establish the Karnataka Manuscripts Authority and for matters connected there with or incidental thereto.

Be it enacted by the Karnataka State Legislature in the seventy seven year of the Republic of India as follows:

**1. Short title, and commencement.-** (1) This Act may be called the Karnataka Jnana Bhandar Manuscripts and Digitisation Act, 2026.

(2) It shall come into force on such date as the State Government may, by notification, appoint

**2. Definitions.-** In this Act, unless the context otherwise requires,-

(a) "Manuscript" means any handwritten or palm-leaf document, birch-bark, paper, cloth, copper-plate, stone inscription or any other material bearing script in Sanskrit, Kannada, Prakrit, Pali, Tamil, Telugu, Arabic, Persian, Modi, Sharada or any other Indian or foreign script, not printed or lithographed, and includes illustrated manuscripts, miniature paintings on palm-leaf or paper, and audio-visual recordings of oral traditions that preserve ancient knowledge,

(b) "Authority" means the Karnataka Manuscripts Authority established under section 3.

**3. Establishment of the Authority.-** (1) The State Government shall, by notification, establish a body to be called the Karnataka Manuscripts Authority.

(2) The Authority shall be a body corporate having perpetual succession and a common seal.

**4. Composition of the Authority.-** The Authority shall consist of following members namely:-

(a) the Minister in-charge of Archeology - ex-officio-Chairperson.

(b) the Secretary to Government, Department of Tourism-ex-officio Member-Secretary.

(c) the Secretary to Government, Finance Department - ex-officio Member.

(d) the Secretary to Government, Higher Education Department - ex-officio Member.

(e) Vice-Chancellor, Hampi Kannada University- ex-officio Member.

(f) the Director, Oriental Research Institute, Mysuru- ex-officio Member.

(g) the Commissioner, Department of Archaeology Museums and Heritage-ex-officio Member.

(h) three eminent scholars in Indology, Kannada literature or manuscriptology nominated by the State Government- Members.

(i) two representatives of private manuscript holders or mathas-Members.

(j) one expert in digital humanities – Member.

**5. Functions and powers of the Authority.-** The Authority shall,-

(a) cause a comprehensive survey of manuscripts in public and private custody within Karnataka and abroad that originated in or relate to Karnataka.

(b) prepare and maintain a State Register of Manuscripts.

(c) promote conservation, preventive and curative, digitisation, critical editing, translation and publication.

(d) establish or recognise Manuscript Conservation Centres and Resource Centres.

(e) frame guidelines for access, reproduction and commercial use while protecting intellectual property rights of traditional custodians.

(f) prevent illicit trafficking and facilitate repatriation of Karnataka manuscripts from abroad.

(g) integrate manuscript knowledge into school and university curricula.

**6. State Register of Manuscripts.-** The Authority shall maintain a digital and physical State Register containing details of location, ownership, physical condition, script, language, subject and access conditions of every manuscript.

**7. Mandatory reporting by owner or possessor.-** Every person or institution possessing manuscripts shall, within one year of the commencement of this Act, furnish particulars to the Authority in the prescribed form.

**8. Access for survey and digitisation.-** The Authority or any officer authorised by it may, with due notice and during reasonable hours, enter any premises to survey, photograph or digitise manuscripts, subject to reasonable conditions imposed by the owner for security and privacy.

**9. Karnataka Manuscript Conservation and Digitisation Mission.-** The Authority shall launch a time-bound Mission for conservation and high-resolution digitisation, of at least 5 lakh folios every year.

**10. Public domain and restricted access.-** Digitised manuscripts in public domain shall be uploaded on a dedicated portal Karnataka Jnana Bhandara with free public access, except where the owner has imposed justified restrictions for religious or privacy reasons.

**11. Karnataka Manuscripts Fund.-** A non-lapsable Fund shall be created with grants from the State Government, Central Government schemes, CSR contributions, and donations.

**12. Prohibition on damage or export without permission.-** No person shall wilfully damage, destroy or export any manuscript declared as Karnataka Heritage Manuscript without prior written permission of the Authority.

**13. Penalties.-** Contravention of section 7 and 12 shall be punishable with imprisonment up to three years or fine up to 5 lakh or both.

**14. Power to make rules.-** The State Government may by notification in the official Gazette make rules after previous publication for carrying out the purposes of this Act.

(2) Every rule made under this Act shall be laid, as soon as may be after they are so made, before the House of the State Legislature, while it is in session, for a period of not less than fourteen days which may be comprised in one session or in two successive sessions and if before the expiry of the session in which it is so laid or of the sessions immediately following, the House of the State Legislature makes

any modification in the rule or resolves that the rule should not be made, the rule shall thereafter have effect only in such modified form or be of no effect, as the case may be, so, however, that any such modification or annulment shall be without prejudice to the validity of anything previously done there under.

**15. Overriding effect.-** The provisions of this Act shall have effect notwithstanding anything inconsistent therewith contained in any other law for the time being in force.

**16. Removal of difficulties.-** (1) If any difficulty arises in giving effect to the provisions of this Act, the State Government may, by an order published in the Official Gazette, do anything, not inconsistent with the provisions of this Act, which appears to it to be necessary or expedient for removing the difficulty:

Provided that, no order under this section shall be madeafter the expiry of two years from the commencement of this Act.

(2) Every order made under this section shall be laid, as soon as may be, after it is so made, before the House of the State Legislature.

## STATEMENT OF OBJECTS AND REASONS

It is considered necessary to,-

(i) provide for the survey, documentation, conservation, digitisation, research, publication and public access of manuscripts in the State of Karnataka; and

(ii) establish the Karnataka Manuscripts Authority to achieve the above said objects.

Hence, the Bill.

## FINANCIAL MEMORANDUM

There is no extra expenditure involved in the proposed legislative measure.

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297



## MEMORANDUM REGARDING DELEGATED LEGISLATION

| | |
|---|---|
| Clause-14 | Sub-clause (1), Empowers the State Government to make rules carrying out the purposes of the Act. |

The proposed delegation of legislative power is normal in character.

**H. K. PATIL**
Minister for Law, Human Rights, Parliamentary
Affairs and Legislation and Tourism

**M.K. VISHALAKSHI**
Secretary
Karnataka Legislative Assembly

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

THAMMAIAH